## ಅಪರೂಪದ ಹೆಲಿಕಾಪ್ಟರ್

ಡಿಎಚ್‌ಆರ್‌ಯುವಿ–ಎರಡು ಎಂಜಿನ್‌ಗಳನ್ನು ಹೊಂದಿರುವ ಈ ಹೆಲಿಕ್ಯಾಪ್ಟರ್ ನೌಕೆದಳ, ವಾಯುಪಡೆ, ಯುದ್ಧ ಭೂಮಿ ಹೀಗೆ ಮೂರು ಕಡೆ ಬಳಸುವಂತೆ ಅಭಿವೃದ್ಧಿ ಪಡಿಸಿದ ಯುದ್ಧ ವಿಮಾನ.

1950ರಲ್ಲಿ ತನ್ನ ಮೊದಲ ಹಾರಟ ಕಂಡ ಡಿ ಹಾವಿಲ್ಯಾಂಡ್ ಮತ್ತು ಯುಕೆನಲ್ಲಿ ಅಭಿವೃದ್ಧಿ ಹೊಂದಿದ ಪ್ರಾಯಾಣಿಕ ವಿಮಾನಗಳನ್ನು ಕಾಣಬಹುದು.

ಎಚ್‌ಎಎಲ್ ನಲ್ಲಿ ತಯಾರಾದ ಕಿರಣ ಎಂಕೆ1, ಎಂಕೆ2 1964ರ ಸೆಪ್ಟೆಂಬರ್‌ನಲ್ಲಿ ಮೊದಲ ಪಯಣ ಬೆಳೆಸಿತು.

ಬೆಂಗಳೂರಿನ ಏರ್‌ಕ್ರಾಫ್ಟ್ ಡಿಸೈನ್ ಬ್ಯೂರೊಯಿಂದ ಅಭಿವೃದ್ಧಿ ಹೊಂದಿದ ಹೆಚ್‌ಪಿಟಿ –32 ವಿಮಾನ 1977ರಲ್ಲಿ ತನ್ನ ಯಾನ ಆರಂಭಿಸಿ, ಸ್ಥಳಾನ್ವೇಷಣೆ, ವೆಪನ್ ಟ್ರೈನಿಂಗ್, ರಾತ್ರಿ ಹಾರಾಟಗಳಲ್ಲಿ ಬಳಕೆಯಾಹಿತ್ತು.

ಖುಷಿಯಾಗುತ್ತದೆ' ಎನ್ನುತ್ತಾರೆ ಬೆಂಗಳೂರಿನ ರಾಜಾಜಿನಗರ ನಿವಾಸಿ ಡಾ. ಸಂಧ್ಯಾ.

'ಬೇಸಿಗೆ ರಜೆ, ದಸರಾ ರಜೆ, ವಾರಾಂತ್ಯಗಳಲ್ಲಿ ಹೆಚ್ಚು ಮಂದಿ ಇಲ್ಲಿಗೆ ಬರುತ್ತಾರೆ. ಶಾಲೆಯಿಂದಲೂ ಮಕ್ಕಳನ್ನು ಕರೆತರುತ್ತಾರೆ. ವಾರಾಂತ್ಯದಲ್ಲಿ 1500ರಿಂದ 2000 ದಷ್ಟು ಮಂದಿ ಭೇಟಿ ಕೊಡುತ್ತಾರೆ' ಎನ್ನುತ್ತಾರೆ ಎಚ್‌ಎಲ್ ಮ್ಯೂಸಿಯಂನ ಅಧಿಕಾರಿ ಬಿ.ಆರ್. ನಾರಾಯಣ ಮೂರ್ತಿ.

'ಕರ್ನಾಟಕದವರಲ್ಲದೆ, ತಮಿಳುನಾಡು, ಮಹಾರಾಷ್ಟ್ರ, ಕೇರಳ ಒಡಿಸ್ಸಾ ಹೀಗೆ ಎಲ್ಲ ರಾಜ್ಯಗಳ ಜನರು ಬರುತ್ತಾರೆ. ಪ್ರತಿದಿನ ಸುಮಾರು 300 ರಿಂದ 500 ಮಂದಿ ಭೇಟಿ ಕೊಡುತ್ತಾರೆ' ಎನ್ನುತ್ತಾರೆ ಮತ್ತೊಬ್ಬ ಅಧಿಕಾರಿ ದಾಸ್.

ಎಂಜಿನ್: ಆಂಗ್ಲೋ – ಫ್ರೆಂಚ್ ಕೊಲಾಬರೇಷನ್‌ನಲ್ಲಿ ರೂಪುಗೊಂಡ ಅಡೋರ್ ಎಂಕೆ 811 ಎಂಜಿನ್‌ಅನ್ನು ಎಚ್‌ಎಎಲ್‌ನಲ್ಲಿ ತಯಾರಿಸಲಾಗಿದ್ದು, ಅದನ್ನು ಜಗೂರ್ ವಿಮಾನಕ್ಕೆ ಅಳವಡಿಸಲಾಗಿತ್ತು. ಈ ಎಂಜಿನ್‌ನ ಗಾತ್ರ, ತೂಕ, ಇಂಧನ ಸಾಮರ್ಥ್ಯ ಎಲ್ಲ ವಿವರಗಳನ್ನೂ ಬರೆಯಲಾಗಿದೆ. ಎಂಜಿನ್‌ನ ಪಕ್ಕದಲ್ಲಿ ಜಗೂರ್ ಏರ್‌ಕ್ರಾಫ್ಟ್‌ನ ಮಾದರಿ ಸಹ ಇಡಲಾಗಿದೆ. ಆರ್ಫಿಯಸ್ 70105 ಎಂಜಿನ್ ಗಾರೆಟ್ 33–5–252, ಎಚ್‌ಜೆಇ 2500, ಡಾರ್ಟ್ ಮಾರ್ಕ್ 533–2, ಸಿಂಗಲ್ ಶಫ್ಟ್ ಟರ್ಬೈನ್ ಎಂಜಿನ್‌ಗಳನ್ನೂ ಪ್ರದರ್ಶಿಸಲಾಗಿದೆ.

ನೈಜ ವಿಮಾನ: ಲೈಟ್ ಅಬ್‌ಸರ್ವೇಷನ್ ಹೆಲಿಕೊಪ್ಟರ್, ಒಂದೇ ಸೀಟ್ ಹೊಂದಿರುವ ಬಸಂತ್ ವಿಮಾನವನ್ನು ಎಚ್‌ಎಎಲ್ ವಿನ್ಯಾಸಗೊಳಿಸಿ, ಅಭಿವೃದ್ಧಿ ಪಡಿಸಿದೆ. ಇದನ್ನು ಕೃಷಿ ಭೂಮಿ ವೀಕ್ಷಸಲು, ಔಷಧ ಸಿಂಪಡಣೆಗೆ ಸಹಾಯಕವಾಗಲೆಂದು ಅಭಿವೃದ್ಧಿ ಪಡಿಸಲಾಗಿತ್ತು. ಅಪಘಾತ ಅಥವಾ ಬೇರೆ ರೀತಿಯ ಅವಘಡ ಸಂಭವಿಸಿದಾಗ ಪ್ಯಾರಾಚೂಟ್ ಹೇಗೆ ಬಳಸಬೇಕೆಂದು ಮನುಷ್ಯಾಕಾರದ ಗೊಂಬೆ ಮೂಲಕ ತೋರಿಸಲಾಗಿದೆ. ಡಬಲ್ ಡೆಕ್ಕರ್ ಇನ್ನಿತರ ವಿಶಿಷ್ಟ ಸೌಲಭ್ಯವುಳ್ಳ ವಿಮಾನಗಳು, ವಿವಿಧ ದೇಶಗಳ ವಿಮಾನಗಳು, ಯುದ್ಧವಿಮಾನಗಳ ಬಣ್ಣಗಳ ಕುರಿತು ಚಿತ್ರಪಟಗಳ ಮೂಲಕ ಅಚ್ಚುಕಟ್ಟಾಗಿ ವಿವರಿಸಲಾಗಿದೆ.

ಮಾರುತ್ – ಎರಡು ಸೀಟ್‌ಗಳನ್ನು ಹೊಂದಿರುವ ಈ ವಿಮಾನ 1961 ರಲ್ಲಿ ಮೊದಲ ಬಾರಿ ಹಾರಾಟ ಆರಂಭಿಸಿತ್ತು. ಯುಎಸ್‌ಎಸ್‌ಆರ್ ಜೊತೆಗೂಡಿ ತಯಾರಿಸಿದ ಈ ಎಂಐಜಿ–21 ಫೈಟರ್/ಟ್ರೈನರ್ ವಿಮಾನ 1966ರಿಂದ 77ರವರೆಗೆ ಕಾರ್ಯ ನಿರ್ವಹಿಸಿದೆ. ಸೀ ಕಿಂಗ್ ಎಂಕೆ 42, ಯುಕೆ ಮೂಲದ ಹೆಲಿಕ್ಯಾಪ್ಟರ್ ಕಂಪೆನಿ ತಯಾರಿಸಿದ ಈ ವಿಮಾನ ಭಾರತೀಯ ನೌಕಾನೆಲೆಯಲ್ಲಿ ಕಾರ್ಯನಿರ್ವಹಿಸಿತ್ತು.



ರಡಾರ್: ಏರ್ ಟ್ರಾಫಿಕ್ ರಡಾರ್ ಅಂಡ್ ಆಂಟೆನಾ, ವಿಮಾನಗಳ ಹಾರಾಟ, ಯಾವ ದಿಕ್ಕಿನಲ್ಲಿ ಹಾರುತ್ತಿವೆ, ಮತ್ತು ಅವುಗಳಿಂದ ಬರುವ ಸಂದೇಶಗಳ ರವಾನಿಸುವ ಕೆಲಸವನ್ನು ಈ ರೆಡಾರ್ ಮಾಡುತ್ತಿತ್ತು. ಮೆಟ್ರೊಲಾಜಿಕಲ್ ರಡಾರ್– ಇದು ವಿಮಾನ ಹಾರುವ ಸ್ಥಳದ ವಾತಾವರಣದ ವರದಿ ನೀಡುತ್ತಿತ್ತು.

ಹಗುರ ಯುದ್ಧ ವಿಮಾನ: ಹಿಂದೂಸ್ತಾನ್ ಜೆಟ್ ಟ್ರೈನರ್ –36 ಐಜೆಟಿ. ಏರೋನ್ಯಾಟಿಕ್ ಡೆವೆಲಪ್ಮೆಂಟ್ ಏಜೆನ್ಸಿಯೊಟ್ಟಿಗೆ ಎಚ್‌ಎಎಲ್ ಅಭಿವೃದ್ಧಿ ಪಡಿಸಿದ ಹಗುರ ಯುದ್ಧ ವಿಮಾನವಿದು, ಎಲ್ಲ ಬಗೆಯ ವಾತಾವರಣದಲ್ಲಿಯೂ ಕಾರ್ಯ ನಿರ್ವಹಿಸುವಂತೆ ಅಭಿವೃದ್ಧಿ ಪಡಿಸಲಾಗಿತ್ತು.



ಸಂಧಿಲಿನ್
SANDHILIN सन्धिलिन
ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
CLINICALLY PROVED


- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ